# ✻ ಭಾರತೀಯ ನಾರಿ ನಡೆದು ಬಂದ ದಾರಿ ✻

ಸ್ವಾಮಿ ಹರ್ಷಾನಂದ

ವೇದ, ಉಪನಿಷತ್ತುಗಳು ಹಾಗೂ ಪುರಾಣಗಳ ಕಾಲದಲ್ಲಿದ್ದ ನಾರಿಯರ ಪರಿಚಯದೊಂದಿಗೆ ಸ್ತ್ರೀಯರ ಸಾಮಾಜಿಕ ಸ್ಥಾನಮಾನಗಳನ್ನೂ ಪರಿಚಯ ಮಾಡಿಕೊಡುವ ಈ ಲೇಖನವನ್ನು ಬೆಂಗಳೂರಿನ ರಾಮಕೃಷ್ಣ ಮಠದ ಅಧ್ಯಕ್ಷರಾಗಿರುವ ಪೂಜ್ಯ ಸ್ವಾಮಿ ಹರ್ಷಾನಂದಜಿ ಆಂಗ್ಲಭಾಷೆಯಲ್ಲಿ ಬರೆದಿದ್ದಾರೆ. ಕನ್ನಡ ಅನುವಾದವನ್ನು ಮಾಡಿಕೊಟ್ಟಿರುವವರು ಎಚ್. ವಿ.ವಿಶ್ವನಾಥ್.

## ಪೀಠಿಕೆ

ಒಂದು ಸಂಸ್ಕೃತಿಯ, ನಾಗರಿಕತೆಯ ಶ್ರೇಷ್ಠತೆಗೆ, ಔನ್ನತ್ಯಕ್ಕೆ ಅದರ ಸ್ತ್ರೀವರ್ಗದ ಹಿರಿಮೆ-ಗರಿಮೆಗಳೇ ಅಳತೆಗೋಲು ಎನ್ನುವ ಮಾತೊಂದಿದೆ. ನಮ್ಮ ವೇದ-ಪುರಾಣಕಾಲಗಳ ಸ್ತ್ರೀಯರ ವಿಚಾರದಲ್ಲಿ ಈ ಮಾತು ಸಂದೇಹಕ್ಕೆಡೆಯಿಲ್ಲದಂತೆ ಸಾಬೀತುಗೊಂಡಿದೆ.

ವಾಗಾಂಭೃಣಿಯ ಬ್ರಹ್ಮಜ್ಞಾನ (ಪ್ರಸ್ತಾಪ: ಋಗ್ವೇದ ೧೦.೧೨೫.೧-೮), ಗಾರ್ಗೀ ವಾಚಕ್ನವಿಯ ಬುದ್ಧಿಮತ್ತೆ (ಬೃಹದಾರಣ್ಯಕೋಪನಿಷತ್ ೩.೬.೧), ಸುಲಭೆಯ ಯೋಗದ ಅನುಭಾವಗಳು (ಮಹಾಭಾರತ, ಶಾಂತಿಪರ್ವ ೩೨೦), ಆಚಾರ್ಯಳೆಂಬ ಗೌರವಕ್ಕೆ ಪಾತ್ರಳಾಗಿದ್ದ ಅರುಂಧತಿಯ ಪ್ರಕಾಂಡ ವಿದ್ವತ್ತು (ಮಹಾಭಾರತ, ಅನುಶಾಸನಪರ್ವ ೧೩೦), ಸಾವಿತ್ರಿಯ ಪತಿಭಕ್ತಿಪರಾಯಣತೆ (ಮಹಾಭಾರತ, ವನಪರ್ವ ೨೯೭), ಅನಸೂಯೆಯ ಪರಿಶುದ್ಧ ಚಾರಿತ್ರ್ಯ (ಮಹಾಭಾರತ, ಆದಿಪರ್ವ ೬೫) ಮತ್ತು ಸೀತೆಯಲ್ಲಿ ಸಾಕಾರಗೊಂಡಿದ್ದ, ಸಕಲ ಸ್ತ್ರೀಯರಲ್ಲೂ ಸಹಜವಾಗಿ ಇರಬಲ್ಲ ಸದ್ಗುಣಸಮೂಹ (ರಾಮಾಯಣ) —ಇವೆಲ್ಲವೂ, ಮಹಿಳೆ ಯಾವ ಎತ್ತರಕ್ಕೆ ಏರಬಲ್ಲಳೆಂಬುದಕ್ಕೆ ಉದಾಹರಣೆಗಳು. ಇಂತಹ ಅದ್ಭುತಗಳನ್ನು ಸಾಧಿಸಿ ತೋರಿಸಿದ ಭಾರತೀಯ ವನಿತೆಯರು ಸರ್ವಕಾಲಕ್ಕೂ ಶ್ರೇಷ್ಠರೆನಿಸಿದ್ದಾರೆ.

## ಮೂಲಭೂತ ಹಿಂದೂ ದೃಷ್ಟಿಕೋನ

ಭಾರತೀಯ ಸ್ತ್ರೀತ್ವ ಇಂತಹ ಉತ್ತುಂಗ ಮಟ್ಟಕ್ಕೆ ಏರಲು ಆ ಕಾಲದಲ್ಲಿ ಹೇಗೆ ಸಾಧ್ಯವಾಯಿತು? ಸ್ತ್ರೀಪುರುಷರಿಬ್ಬರೂ ಒಂದೇ ದಿವ್ಯತೆಯ ಎರಡು ಸಮಾನ ಮುಖಗಳು ಎಂದು ಹಿಂದೂ ಶಾಸ್ತ್ರಗಳ ಸಾರಸರ್ವಸ್ವವಾದ ವೇದಾಂತವು ಘಂಟಾ ಘೋಷವಾಗಿ ಸಾರುವುದು (ಆಧಾರಗಳು: ಶ್ವೇತಾಶ್ವತರ ಉಪನಿಷತ್, ೪.೩; ಬೃಹದಾರಣ್ಯಕ ಉಪನಿಷತ್ ೧.೪.೪). ಆ ದಿವ್ಯತೆಯನ್ನು ಅಭಿವ್ಯಕ್ತಗೊಳಿಸಲು ಇಬ್ಬರೂ ಸಮಾನ ಶಕ್ತರು. ಆದ್ದರಿಂದ ಅವರಿಗೆ ಅದನ್ನು ಸಾಧಿಸಿಕೊಳ್ಳಲು ಸಮಾನ ಅವಕಾಶಗಳನ್ನು ಒದಗಿಸಬೇಕು ಎಂಬುದು ಇಲ್ಲಿನ ತಾತ್ಪರ್ಯ. ಸತ್ಯಾನ್ವೇಷಣೆಗೆ ಪ್ರಸಿದ್ಧಳಾಗಿದ್ದ (ಬೃಹದಾರಣ್ಯಕ ಉಪನಿಷತ್ ೨.೪, ೩-೫) ಮತ್ತು ಮುಕ್ತಚೇತನಳೆನಿಸಿದ ವಾಗಾಂಭೃಣೀ (ಋಗ್ವೇದ ೧೦.೧೨೫) ಉದಾಹರಣೆಗಳಾಗಿ ಕಂಗೊಳಿಸುತ್ತಾರೆ.

ಇನ್ನೊಂದು ಮೂಲಭೂತ ಅಂಶವನ್ನು ಇಲ್ಲಿ ನೆನಪಿಡ ಬೇಕು. ಸ್ತ್ರೀ, ಪುರುಷರಿಬ್ಬರೂ—ಅಷ್ಟೇಕೆ, ವಿಶ್ವದ ಪ್ರತಿಯೊಂದು ಜೀವಿಯೂ- ಮೂಲತಃ ಅಮರವೂ ಶುದ್ಧಚೈತನ್ಯವೂ ಆದ ಆತ್ಮವೇ. ಒಂದು ಜೀವಿಯು ಸ್ತ್ರೀಯಾಗಿಯೋ ಪುರುಷ ನಾಗಿಯೋ ಜನ್ಮತಾಳುವುದು ಅದರ ಪೂರ್ವಕರ್ಮಕ್ಕನು ಸಾರವಾಗಿ. ಒಂದೇ ಜೀವಿಯು ಒಮ್ಮೆ ಸ್ತ್ರೀದೇಹದಲ್ಲಿ, ಮತ್ತೊಮ್ಮೆ ಪುರುಷದೇಹದಲ್ಲಿ ಜನ್ಮಾಂತರಗಳಲ್ಲಿ ಹುಟ್ಟಬಹುದು.

ಈ ಮೂಲಭೂತ ನಂಬಿಕೆಯನ್ನು ಪುರಾತನ ಹಿಂದೂ ಋಷಿಗಳು ಸದಾ ನೆನಪಿಟ್ಟುಕೊಂಡು ಸ್ತ್ರೀಯರಿಗೆ ಲೌಕಿಕ ಅಥವಾ ಪಾರಲೌಕಿಕ ಆದರ್ಶವನ್ನು ಅನುಸರಿಸುವ ಸ್ವಾತಂತ್ರ್ಯವನ್ನು ನೀಡಿದ್ದರು.

## ಕಾಲಘಟ್ಟಗಳ ಮೂಲಕ ಹಿಂದೂ ಮಹಿಳೆ :

**೧. ಒಂದು ಸ್ಥೂಲ ಸಮೀಕ್ಷೆ:** ನಾವು ಪೂರ್ವಕಾಲದ ಹಿಂದೂಶಾಸ್ತ್ರಗಳನ್ನು ಪರಿಶೀಲಿಸಿದರೆ, ಮಹಿಳೆಯರಿಗೆ ಇದ್ದ ಸ್ವಾತಂತ್ರ್ಯದ ಕುರಿತು ಸ್ಪಷ್ಟ ನಿದರ್ಶನ ಸಿಗುತ್ತದೆ. ಅತ್ಯಂತ ಪುರಾತನವಾದ ಋಗ್ವೇದದಲ್ಲೇ ವಿಶ್ವವಾರಾ (೫.೨೮), ಅಪಾಲಾ (೮.೯೧), ಘೋಷಾ ಕಾಕ್ಷೀವತೀ (೧.೩೯) ಮುಂತಾದ ಸುಮಾರು ಮೂವತ್ತು ಸ್ತ್ರೀ-ಋಷಿಗಳನ್ನು ಮಂತ್ರಕರ್ತರೆಂದು ಹೆಸರಿಸಲಾಗಿದೆ. ಹೆಣ್ಣುಮಕ್ಕಳಲ್ಲಿ, ಉಪನಯನ ಸಂಸ್ಕಾರ ಕೈಕೊಳಪಟ್ಟು ಗುರುಕುಲದಲ್ಲಾಗಲಿ, ಸ್ವಗೃಹದಲ್ಲೇ ಆಗಲಿ ಇದ್ದು ಕೊಂಡು ವೇದಾಧ್ಯಯನ ಮಾಡುವವರು ಇರುತ್ತಿದ್ದರು. ಅಂಥವರಿಗೆ ಬ್ರಹ್ಮವಾದಿನಿಯರೆಂಬ ಹೆಸರಿತ್ತು. ವೇದವನ್ನು ಓದದೆ ನೇರವಾಗಿ ಮದುವೆ ಮಾಡಿಕೊಳ್ಳುವ ಹುಡುಗಿಯರನ್ನು ಸದ್ಯೋವಧುಗಳೆಂದು ಕರೆಯುತ್ತಿದ್ದರು. ಆದರೆ ಇಂಥವರಿಗೂ ಕೂಡ ವಿವಾಹಕ್ಕೆ ಸ್ವಲ್ಪವೇ ಮೊದಲು ಉಪನಯನವನ್ನಂತೂ ಮಾಡಲಾಗುತ್ತಿತ್ತು.

ಕಾಲಕ್ರಮದಲ್ಲಿ, ಹುಡುಗಿಯರನ್ನು ಗುರುಕುಲಕ್ಕೆ ಕಳಿಸುವ ಸಂಪ್ರದಾಯ ಅಳಿಸಿಹೋಗಿ, ಅವರಿಗೆ ಶಿಕ್ಷಣ ಕೊಡುವ

ವಿವಾಹಪ್ರಾರಿಯನ್ನು ತಂದೆ ಅಥವಾ ಕುಟುಂಬದ ಹಿರಿಯ ಪುರುಷರೇ ವಹಿಸಿಕೊಳ್ಳತೊಡಗಿದಂತೆ ತೋರುತ್ತದೆ. ಮುಂದೆ ಪುರಾಣಕಾಲದಲ್ಲೂ ಸಹ ಸ್ತ್ರೀಯರು ಉಪನಯನ ಸಂಸ್ಕಾರವನ್ನು ಪಡೆಯಬಹುದಾಗಿತ್ತು; ವೇದಗಳನ್ನು ಅಧ್ಯಯನ ಮಾಡುವುದಲ್ಲದೆ, ವೇದಗಳ ಬೋಧಕರೂ ಆಗಬಹುದಿತ್ತು. ಪ್ರಾಯಶಃ ಮನುಸ್ಮೃತಿಯ (ಕ್ರಿಪೂ.೨೦೦) ವೇಳೆಗೆ ಇದು ಮರೆಯಾಯಿತು. ಸ್ಮೃತಿಗಳ ಮತ್ತು ಧರ್ಮಶಾಸ್ತ್ರಗಳ ಕಾಲಕ್ಕೆ, ಸ್ತ್ರೀಯರ ಸ್ಥಾನ ಕ್ರಮೇಣ ಇಳಿಮುಖವಾಗಿತ್ತು. ಅವರ ಹಿಂದಿನ ಧಾರ್ಮಿಕ ಅಧಿಕಾರಗಳನ್ನೆಲ್ಲ ಕಿತ್ತುಹಾಕಿ ಅವರನ್ನು ಶೂದ್ರರಿಗೆ ಸಮಾನವಾಗಿ ಪರಿಗಣಿಸಲು ಕೂಡ ಆರಂಭವಾಗಿತ್ತು. ವಿದೇಶಿ ಶಕ್ತಿಗಳು ಮತ್ತೆ ಮತ್ತೆ ನಡೆಸಿದ ಮರಾಕ್ರಮಣಗಳಿಂದ ಉಂಟಾದ ಸಾಮಾಜಿಕ ಅಸ್ತವ್ಯಸ್ತತೆ ಈ ಪರಿಸ್ಥಿತಿಗೆ ಕೆಲಮಟ್ಟಿಗೆ ಕಾರಣವಾಗಿರಬಹುದು.

ಆದರೆ ಮುಂದಿನ ಕತ್ತಲಡರಿದ ಮಧ್ಯಯುಗಗಳಲ್ಲೂ (ಕ್ರಿ.ಶ.೯೦೦ರಿಂದ ಈಚೆಗೆ) ವಿವಿಧ ರಂಗಗಳಲ್ಲಿ ಪಾರಮ್ಯ ಕ್ಕೇರಿದ ಅನೇಕ ನಾರೀಮಣಿಯರು ಈ ದೇಶದಲ್ಲಿ ಹುಟ್ಟಿ, ಪುರಾತನ ಭಾರತದ ಸ್ಫೂರ್ತಿಜ್ವಾಲೆಯನ್ನು ಬೆಳಗಿಸುತ್ತ ಬಂದರು ಎನ್ನುವುದು ನಿಜಕ್ಕೂ ನಮ್ಮ ಪಾಲಿಗೆ ಅತ್ಯಂತ ಹೆಮ್ಮೆಯ ಮತ್ತು ಸಮಾಧಾನದ ವಿಷಯ. ಇಂಥವರಲ್ಲಿ ಕೇತಲಾದೇವಿಯಂತಹ (೧೨ನೇ ಶತಕ) ಸಾಹಿತಿಗಳು, ನಾಯಿಕಾ ದೇವಿಯಂತಹ (ಗುಜರಾತ್, ಕ್ರಿ.ಶ.೧೧೫೮) ಸೇನಾನಿಗಳು, ಅಹಲ್ಯಾಬಾಯಿ ಹೋಳ್ಕರ್‌ರಂತಹ (೧೭೨೫–೯೫) ಆಡಳಿತಗಾರರು ಮತ್ತು ಮೀರಾಬಾಯಿಯಂತಹ (೧೫೮೭–೧೬೧೪) ಸಂತರು ಕೆಲವರಷ್ಟೇ. ಉತ್ತಮ ಜೀವನ ಹಾಗೂ ಮೌಲ್ಯಗಳನ್ನು ತಮ್ಮದಾಗಿಸಿಕೊಂಡಿದ್ದ ಅನೇಕ ಮಹಿಳೆಯರು ಕಾಲಗರ್ಭದಲ್ಲಿ ಹೇಳಹೆಸರಿಲ್ಲದೆ ಹೋಗಿರುವುದರಲ್ಲಿ ಸಂಶಯವಿಲ್ಲ.

ದೇಶಕ್ಕೆ ಲಭಿಸಿದ ರಾಜಕೀಯ ಸ್ವಾತಂತ್ರ್ಯ ಮತ್ತು ಹಿಂದೂ ಧರ್ಮದೊಳಗೇ ನಡೆದ ಸುಧಾರಣಾ ಚಳವಳಿಗಳ ಫಲವಾಗಿ, ಇತ್ತೀಚೆಗೆ ಸ್ತ್ರೀಯರ ಸ್ಥಿತಿಗತಿಗಳು ಬಹಳಷ್ಟು ಉತ್ತಮಗೊಂಡಿವೆ ಎನ್ನಲೇಬೇಕು.

**೨. ಸಾಮಾಜಿಕ ವ್ಯವಸ್ಥೆಯ ಪಕ್ಷಿನೋಟ :** ಕಳೆದ ಒಂದು ಶತಮಾನದ ಅವಧಿಯಲ್ಲಿ ಮಹಿಳೆಯರ ಸ್ಥಾನಮಾನದಲ್ಲಿ ಸಾಕಷ್ಟು ಬದಲಾವಣೆಗಳಾಗುತ್ತ ಬಂದಿವೆ. ವೇದ ಹಾಗೂ ಪುರಾಣಯುಗಗಳಲ್ಲಿ ಅವರಿಗೆ ಉತ್ತಮ ಶಿಕ್ಷಣ ಲಭ್ಯವಿತ್ತು; ವಯಸ್ಕರಾದ ಮೇಲೆ ತಮ್ಮಿಚ್ಛೆಯ ಪತಿಯನ್ನು ಆಯ್ದುಕೊಳ್ಳುವ ಸ್ವಾತಂತ್ರ್ಯವಿತ್ತು. ಪತ್ನಿಯರಾಗಿ ಮತ್ತು ತಾಯಿಯರಾಗಿ, ವೈದಿಕ ಯಜ್ಞಗಳಲ್ಲೂ ಕರ್ಮವಿಧಿಗಳಲ್ಲೂ ಅವರಿಗೆ ಗೌರವದ ಸ್ಥಾನವಿತ್ತು. ಅವಿವಾಹಿತರಾಗಿಯೇ ಇದ್ದು ಆಧ್ಯಾತ್ಮಿಕ ಸಾಧನೆಗೆ ಜೀವನವನ್ನು ಮುಡಿಪಾಗಿಡುವ ಸ್ವಾತಂತ್ರ್ಯವೂ ಅವಕಾಶವೂ ಸ್ತ್ರೀಯರಿಗಿತ್ತು.

ಪರಕೀಯರ ಪುನರಾವರ್ತಿತ ದಾಳಿಗಳು ತಂದೊಡ್ಡಿದ ಆತಂಕಸ್ಥಿತಿಯ ಕಾರಣದಿಂದಾಗಿ ಹಿಂದೂ ಸಮಾಜ ತನ್ನ ಹೆಂಗಸರ ಮೇಲೆ ಅನೇಕ ದಿಗ್ಬಂಧನಗಳನ್ನು ಹೇರುವಂತೆ ಮಾಡಿತು. ತನ್ನ ತವರುಮನೆಯಲ್ಲೇ ಆಗಲಿ, ಗಂಡನ ಮನೆಯಲ್ಲೇ ಆಗಲಿ, ಹೆಣ್ಣು ನಾಲ್ಕು ಗೋಡೆಗಳ ನಡುವೆ ಬಂಧಿತಳೇ ಆಗಿಬಿಟ್ಟಳು. ಈ ದಿಗ್ಬಂಧನದ ದುಷ್ಪರಿಣಾಮಗಳಲ್ಲಿ ಒಂದೆಂದರೆ, ಮದುವೆಗಳು ಅಪ್ರೌಢ ವಯಸ್ಸಿನಲ್ಲೇ ನಡೆಯತೊಡಗಿ, ಕೊನೆಗಿದು ಬಾಲ್ಯವಿವಾಹ ಎಂಬ ಹಾಸ್ಯಾಸ್ಪದ ದುಃಸ್ಥಿತಿಗೆ ಬಂದು ನಿಂತದ್ದು. ಇದಕ್ಕೆ ಬಾಲಂಗೋಚಿಯಾಗಿ ಹುಟ್ಟಿಕೊಂಡದ್ದು ಬಾಲವಿಧವೆಯರ ಸಮಸ್ಯೆ. ಗುಲಾಮರಂತೆ ತಮ್ಮ ಇಡೀ ಜೀವನವನ್ನು ಇತರರಿಗಾಗಿ ತೇಯುವ ದುರವಸ್ಥೆ ಇವರದಾಗಿತ್ತು. ಇವರಿಗಾಗಿ ಪುನರ್ವಿವಾಹ ಪದ್ಧತಿಯನ್ನು ಜಾರಿಗೆ ತರಬೇಕೆಂದು ಈಶ್ವರಚಂದ್ರ ವಿದ್ಯಾಸಾಗರರಂಥ (ಕ್ರಿ.ಶ.೧೮೨೦–೧೮೯೧) ಸಮಾಜಸುಧಾರಕರು ಪ್ರಯತ್ನ ನಡೆಸಿದರೂ ಅದು ಅಷ್ಟೇನೂ ಫಲಿಸಲಿಲ್ಲ.

ಉಳಿದ ವಯಸ್ಕ ವಿಧವೆಯರಿಗೆ (ಮಕ್ಕಳೊಂದಿಗರಿಗೂ ಕೂಡ) ಹಿಂದೂ ಜೀವನದೃಷ್ಟಿಯ ಅನುಸಾರ ಕೆಲವು ಆರೋಗ್ಯಕರ ನಿಯಮಗಳಿದ್ದವು. ಒಟ್ಟಿನಲ್ಲಿ, ಸನ್ಯಾಸಿಗಳ ತಾಪಸಜೀವನವನ್ನು ಇವರು ನಡೆಸಬೇಕಾಗಿತ್ತು. ವಿಧವೆಯರ ಕೇಶಮುಂಡನ (ಮತ್ತೊಂದು ಕೆಟ್ಟ ಪದ್ಧತಿ) ಇದ್ದುದು ದಕ್ಷಿಣ ಭಾರತದ ಸಂಪ್ರದಾಯಸ್ಥ ಬ್ರಾಹ್ಮಣರ ಒಂದು ಸಣ್ಣ ವರ್ಗದಲ್ಲಷ್ಟೇ; ಈಗ ಇಲ್ಲೂ ಅದು ಬಹುಮಟ್ಟಿಗೆ ನಶಿಸಿದೆ. ಮಹಿಳೆಯ ಪುನರ್ವಿವಾಹಕ್ಕೂ ಸಮಾಜದಲ್ಲಿ ಅವಕಾಶವಿತ್ತು – ಆದರದು ಕೆಲವು ವಿಶಿಷ್ಟ ಸಂದರ್ಭಗಳಲ್ಲಿ ಮಾತ್ರವೇ. ಉದಾಹರಣೆಗೆ, ಮಿಲನಕ್ಕೆ ಮುನ್ನವೇ ಪತಿವಿಯೋಗವಾದರೆ, ಅಥವಾ ಗಂಡ ಬಹಳ ಕಾಲ ನಾಪತ್ತೆಯಾಗಿದ್ದರೆ, ಇಲ್ಲವೆ ಆತ ಸನ್ಯಾಸ ಸ್ವೀಕಾರ ಮಾಡಿದರೆ ಇದು ಸಾಧ್ಯವಿತ್ತು.

ವಿವಾಹವನ್ನು ಒಂದು ಸಂಸ್ಕಾರವೆಂದು ಮತ್ತು ಆಜೀವ ಬಾಂಧವ್ಯವೆಂದು ಗಣಿಸಿದ್ದುದರಿಂದ ವಿವಾಹವಿಚ್ಛೇದನದ ಕಲ್ಪನೆಯೇ ಆಗ ಇರಲಿಲ್ಲ. ಧರ್ಮಶಾಸ್ತ್ರಗಳಲ್ಲಿ ಎಂಟು ಬಗೆಯ ವಿವಾಹಗಳನ್ನು ಹೇಳಿದ್ದರೂ, ಬ್ರಾಹ್ಮ, ದೈವ, ಆರ್ಷ ಮತ್ತು ಪ್ರಾಜಾಪತ್ಯ ಎಂಬ ಮೊದಲ ನಾಲ್ಕಕ್ಕಷ್ಟೇ ನ್ಯಾಯಬದ್ಧವೆಂಬ ಮನ್ನಣೆಯಿತ್ತು. ಎಂಥ ಪರಿಸ್ಥಿತಿಯಲ್ಲೂ ಹೆಂಡತಿ ತನ್ನ ಶೀಲವನ್ನು ಉಳಿಸಿಕೊಂಡು, ಪತಿಭಕ್ತಿ ಪರಾಯಣೆಯಾಗಿರಬೇಕಿತ್ತು. ಹಾಗೆಯೇ, ಗಂಡನು ಆಕೆಯನ್ನು ಪ್ರೀತಿ,

ವಿಶ್ವಾಸ, ಆದರಗಳಿಂದ ಕಾಣಬೇಕೆನ್ನುವ ನಿರೀಕ್ಷೆ ಇತ್ತೆಂಬುದನ್ನು ಕಾಣಬಹುದಾಗಿತ್ತು. ಧಾರ್ಮಿಕ ವಿಧಿಗಳಲ್ಲೂ ಮಡದಿಯ ಪಾತ್ರ ಹಿರಿದಾಗಿತ್ತು.

ಕುಟುಂಬದಲ್ಲಿ ತಾಯಿಯ ಸ್ಥಾನವಂತೂ ಅತ್ಯುನ್ನತವಾದುದು. ಸ್ವಯಂ ತಂದೆಗಿಂತಲೂ ಆಕೆ ಬಹಳ ಹೆಚ್ಚಿನವಳು ಎಂದು ಸಾರುವ ಮೂಲಕ (ಮನುಸ್ಮೃತಿ ೨.೧೪೫) ತಾಯಿಯನ್ನು ದೇವತಾಸ್ಥಾನಕ್ಕೇ ಏರಿಸಲಾಗಿತ್ತು. ಆಕೆಯೇನಾದರೂ ಶಾಪವಿತ್ತಳೆಂದರೆ ಅದಕ್ಕೆ ಪರಿಹಾರವೇ ಇರಲಿಲ್ಲ. ಒಬ್ಬ ಸನ್ಯಾಸಿಯಾದನೆಂದರೆ, ಆತನ ತಂದೆಯ ಸಮೇತ ಸಮಾಜದ ಪ್ರತಿಯೊಬ್ಬನೂ ಅವನಿಗೆ ಶಿರ ಬಾಗಬೇಕಾದರೂ, ತನ್ನ ತಾಯಿಗೆ ಮಾತ್ರ ಸನ್ಯಾಸಿಯೇ ಪ್ರಣಾಮ ಸಲ್ಲಿಸಬೇಕು!

ಹೆಂಡತಿಯು ತನ್ನ ಗಂಡನ ಚಿತಾಗ್ನಿಯನ್ನು ಪ್ರವೇಶಿಸಿ ಪ್ರಾಣತ್ಯಾಗ ಮಾಡುವ ಸತೀ ಪದ್ಧತಿ ಭಾರತದ ಇತಿಹಾಸದಲ್ಲಿ ಪ್ರಸಿದ್ಧವಾಗಿದೆ. ಆದರೆ ಹಾಗೆ ಸಾಯುವುದು ಆಕೆಯ ನಿರ್ಧಾರಕ್ಕೆ, ಇಚ್ಛೆಗೆ ಒಳಪಟ್ಟಿತ್ತು ಮತ್ತು ಇದು ಹೆಚ್ಚಾಗಿ ರಾಜಮನೆತನಗಳಿಗೆ ಸೀಮಿತವಾಗಿತ್ತು. ಅತ್ಯಂತ ಅಮಾನುಷ ರೀತಿಯಲ್ಲಿ ಬಲಾತ್ಕಾರದ ವಿಧವಾದಹನ ಪ್ರಸಂಗಗಳು ಒಂದು ಅವಧಿಯಲ್ಲಿ (೧೮ನೇ ಶತಕದ ಬಂಗಾಳದಲ್ಲಿ) ನಡೆದುವಾದರೂ, ಅದಕ್ಕೆ ಸಾಮಾನ್ಯರ ಬೆಂಬಲ ಎಂದೂ ಇರಲಿಲ್ಲ. ರಾಜಾ ರಾಮಮೋಹನ ರಾಯ್‌ರಂತಹ (ಕ್ರಿ.ಶ.೧೭೭೨-೧೮೩೩) ಸುಜ್ಞಾನಿ ನೇತಾರರ ಪ್ರಯತ್ನಗಳಿಂದಾಗಿ ಇದು ಮೂಲೋಚ್ಚಾಟನಗೊಂಡಿತು.

ರಜಪೂತ ಮಹಿಳೆಯರಲ್ಲಿ ರೂಢಿಯಲ್ಲಿದ್ದ ಜೋಹರ್ ಪದ್ಧತಿಯು ಇದಕ್ಕೆ ಸಂಬಂಧಿಸಿದೆ. ಯುದ್ಧಸಂದರ್ಭಗಳಲ್ಲಿ ಸೋಲು ನಿಶ್ಚಿತವಾಗಿ, ಶತ್ರುಗಳ ಕೈಗೆ ಸೆರೆಸಿಕ್ಕು ಬಂಧನ, ಮಾನಭಂಗ, ದೌರ್ಜನ್ಯಗಳಿಗೆ ಒಳಗಾಗುವ ಭಯ ಒದಗಿದಾಗ, ಹೆಂಗಸರು ಕೊನೆಯ ಉಪಾಯವಾಗಿ ಅನುಸರಿಸುತ್ತಿದ್ದ ಒಂದು ಬಗೆಯ ಆತ್ಮಹತ್ಯೆ, ಜೋಹರ್. ಇದಕ್ಕೊಂದು ರೀತಿಯಿತ್ತು—ಸ್ತ್ರೀಯರೆಲ್ಲರೂ ಚೆನ್ನಾಗಿ ಸಿಂಗರಿಸಿಕೊಂಡು, ಹಿರಿಯರ ಆಶೀರ್ವಾದ ಪಡೆದು, ಸಾಲಾಗಿ ಬಂದು ಧಗಧಗಿಸುವ ಅಗ್ನಿಕುಂಡಕ್ಕೆ ಧುಮುಕಿ, ಜೀವತ್ಯಾಗ ಮಾಡುತ್ತಿದ್ದರು. ಸ್ತ್ರೀತ್ವದ ಮಾನ, ಗೌರವಗಳು ಅವರ ಪಾಲಿಗೆ ತಮ್ಮ ಪ್ರಾಣಕ್ಕಿಂತಲೂ ಅಮೂಲ್ಯವಾಗಿದ್ದವು. ರಾಷ್ಟ್ರೀಯ ದುರಂತಗಳ ಸಮಯದಲ್ಲಿ ಭಾರತೀಯ ಸ್ತ್ರೀತ್ವವೆನ್ನುವುದು ಯಾವ ಎತ್ತರಕ್ಕೆ ಏರಬಲ್ಲುದಾಗಿತ್ತು ಎನ್ನುವುದಕ್ಕೆ ಇದೊಂದು ದೃಷ್ಟಾಂತ. ಕ್ರಿ.ಶ. ೧೩೦೩, ೧೫೩೪ ಹಾಗೂ ೧೫೬೮ರಲ್ಲಿ ಇಂತಹ ಕನಿಷ್ಠ ಮೂರು ಪ್ರಸಂಗಗಳು ರಾಜಸ್ಥಾನದ ಚಿತ್ತೂರಿನಲ್ಲಿ ನಡೆದಿರುವುದನ್ನು ಇತಿಹಾಸಜ್ಞರು ದಾಖಲಿಸಿದ್ದಾರೆ.

ಕ್ರಮೇಣ ಒಂದು ಪಿಡುಗಾಗಿ ಬದಲಾವಣೆ ಹೊಂದಿದ ಮತ್ತೊಂದು ಸಾಮಾಜಿಕ ಸಂಪ್ರದಾಯವೆಂದರೆ, ದೇವದಾಸಿ ಪದ್ಧತಿ. ಮೂಲತಃ, ಅವಿವಾಹಿತ ಬಾಲಿಕೆಯರನ್ನು ಸ್ಥಳೀಯ ದೇವಾಲಯಗಳ ಒಂದು ದೇವತೆಗೆ ಸಮರ್ಪಿಸಲಾಗುತ್ತಿತ್ತು. ಇವರು ತಮ್ಮ ತಾಯ್ತಂದೆಯರೊಂದಿಗೇ ವಾಸಿಸುತ್ತ, ಮದುವೆಯಾಗುವವರೆಗೂ ವಿಶೇಷ ದಿವಸಗಳಲ್ಲಿ ಸಂಗೀತ-ನೃತ್ಯಗಳ ಸೇವೆ ಸಲ್ಲಿಸುತ್ತ, ದೇವತೆಗಳ ಸಖಿ-ದಾಸಿಯರಂತೆ ಇರುತ್ತಿದ್ದರು. ಆದರೆ ಯಾವಾಗ ದೇವತೆಯೊಂದಿಗಿನ ಈ 'ವಿವಾಹ' ಒಂದು ಶಾಶ್ವತ ವ್ಯವಸ್ಥೆಯಾಗಿ ಮಾರ್ಪಟ್ಟಿತೋ ಆಗ ಅದು ಉಪಪತ್ನಿತ್ವಕ್ಕೂ ವೇಶ್ಯಾವೃತ್ತಿಗೂ ರಹದಾರಿಯಾಯಿತು. ದಕ್ಷಿಣ ಭಾರತದಲ್ಲಿ ಕೆಲವೆಡೆ ಕಾಣಸಿಗುವ ಕುರುಹುಗಳನ್ನು ಬಿಟ್ಟರೆ, ಈ ಕೆಟ್ಟ ಆಚಾರ ಸಮಾಜ ಸುಧಾರಕರ ತೀವ್ರ ಹೋರಾಟಗಳಿಂದಾಗಿ ಪೂರ್ತಿ ತೊಲಗಿದೆ.

ಸ್ವಾತಂತ್ರ್ಯಪೂರ್ವ ದಿನಗಳವರೆಗೂ ಹೆಂಗಸರಿಗೆ ತಮ್ಮ ತಂದೆಯ ಆಸ್ತಿಯ ಮೇಲೆ ಯಾವುದೇ ಹಕ್ಕಿರಲಿಲ್ಲ. ತಮ್ಮ ಗಂಡನ ಆಸ್ತಿಯ ಮೇಲೂ (ಆತನ ಸಾವಿನ ಬಳಿಕವೂ) ಅವರಿಗಿದ್ದ ಹಕ್ಕು ಅತ್ಯಲ್ಪ. ಆದರೆ, ೧೯೫೪-೫೬ರ ಅವಧಿಯಲ್ಲಿ ದೇಶದ ಸಂಸತ್ತು ಹೊರಡಿಸಿದ ಕಾನೂನುಗಳು ಸ್ತ್ರೀಯರ ಪರವಾಗಿ ಕ್ರಾಂತಿಕಾರಕ ಬದಲಾವಣೆಗಳನ್ನು ತಂದಿವೆ. ಇಲ್ಲೇ ಮತ್ತೆರಡು ಆಕ್ಷೇಪಾರ್ಹ ಸಂಪ್ರದಾಯಗಳನ್ನು ಕುರಿತು ಹೇಳಬಹುದು. ಒಬ್ಬಾಕೆಗೆ ತನ್ನ ಗಂಡನಿಂದ ಮಕ್ಕಳಾಗದಿದ್ದಾಗ ಆತನ ಸೋದರರ ಸಂಸರ್ಗದಿಂದ ಮಕ್ಕಳನ್ನು ಪಡೆಯುವ 'ನಿಯೋಗ' ಪದ್ಧತಿಯ ಪ್ರಸ್ತಾಪ ಕಾಣಸಿಗುತ್ತದೆ. ಆದರೆ ಬಹಳ ಹಿಂದೆಯೇ ಅದನ್ನು ರೂಢಿಯಿಂದ ಕೈಬಿಟ್ಟು, ಕಲಿಯುಗದಲ್ಲಿ ಅದು ಪಾಪಕರ ಎಂದು ಸಾರಲಾಯಿತು. ಮತ್ತೆ, ಸ್ತ್ರೀಯರು ತಮ್ಮ ಮುಖವನ್ನು ಬಟ್ಟೆಯಿಂದ ಮರೆಮಾಡಿಕೊಳ್ಳುವ ಪರದಾ (ಘೋಷಾ) ಪದ್ಧತಿ. ಇದರ ವಾಡಿಕೆಯಿದ್ದದ್ದು ರಾಜರ ಮತ್ತು ಅತಿ ಶ್ರೀಮಂತ ಮನೆತನಗಳಲ್ಲಿ ಮಾತ್ರ. ಅದೂ- ಪ್ರಾಯಶಃ ಮುಸ್ಲಿಮರ ಪ್ರಭಾವದಿಂದ—ಉತ್ತರ ಭಾರತದಲ್ಲಿ ಮಾತ್ರ.

ಅಪರಾಧಿ ಹೆಂಗಸರಿಗೆ, ಅದು ಎಂಥ ಗಂಭೀರರೂಪದ ಅಪರಾಧವೇ ಆಗಿದ್ದರೂ, ವಿಧಿಸುತ್ತಿದ್ದ ಶಿಕ್ಷೆ ಅಥವಾ ಪ್ರಾಯಶ್ಚಿತ್ತದ ತೀವ್ರತೆ ಕಡಿಮೆಯೇ ಇರುತ್ತಿತ್ತು. ಮರಣ ದಂಡನೆಯಂತೂ ಇರಲೇ ಇಲ್ಲವೆನ್ನಬೇಕು. ಮಾನಭಂಗಕ್ಕೊಳಗಾದ ಹೆಣ್ಣನ್ನು ಎಂದೂ ಹೊರಹಾಕುವಂತಿರಲಿಲ್ಲ; ಸೂಕ್ತ ಪ್ರಾಯಶ್ಚಿತ್ತ ಹಾಗೂ ಶುದ್ಧಿಯ ವಿಧಿಗಳ ಬಳಿಕ ಅವಳನ್ನು ಪತಿ ಪುನಃ ಸ್ವೀಕರಿಸಬೇಕಿತ್ತು.

ಕುಟುಂಬದ ಯಜಮಾನನ ಹೆಂಡತಿಯೇ ಮನೆಯೊಡತಿ

ಎನ್ನಿಸುತ್ತಿದ್ದಳು. ಧರ್ಮಶಾಸ್ತ್ರಗಳಲ್ಲಿ ನಿರ್ದಿಷ್ಟ ಪ್ರಸ್ತಾಪವಿರದ ಯಾವುದೇ ದೇಶಾಚಾರದ (ಎಂದರೆ ಸ್ಥಳೀಯ ಧಾರ್ಮಿಕ ವಿಧಿಗಳ) ಬಗ್ಗೆ ವಿವಾದ ಉಂಟಾದರೆ, ಆಗ ಈಕೆಯ ಮತ್ತು ಮನೆಯ ಇತರ ಹಿರಿಯ ಮಹಿಳೆಯರ ಅಭಿಪ್ರಾಯಕ್ಕೆ ಮನ್ನಣೆ ಸಿಗುತ್ತಿತ್ತು.

**೨. ಆಧುನಿಕ ಸಂದರ್ಭದಲ್ಲಿ :**

ದೇಶಕ್ಕೆ ದೊರೆತ ಸ್ವಾತಂತ್ರ್ಯ, ಇಡೀ ಭಾರತವನ್ನು ರಾಜಕೀಯವಾಗಿ ಒಂದಾಗಿಸಿತು; ಆದರೆ ದೇಶದ ವಿಭಜನೆ ಅನೇಕ ಕಹಿ ಫಲಗಳನ್ನೂ ತಂದೊಡ್ಡಿತು. ಈ ಎರಡು ಏಕ ಕಾಲಿಕ ಘಟನೆಗಳ ಫಲವಾಗಿ, ಕಳೆದ ಐವತ್ತು ವರ್ಷಗಳಲ್ಲಿ, ಹಿಂದಿನ ಎಷ್ಟೋ ಶತಮಾನಗಳಲ್ಲಿ ಆದದ್ದಕ್ಕಿಂತ ಹೆಚ್ಚು ತೀವ್ರ ವಾಗಿ ಹಿಂದೂ ಮಹಿಳೆಯ ಜೀವನಶೈಲಿ ಬದಲಾಗಿಬಿಟ್ಟಿದೆ.

ಸಾಮಾನ್ಯವಾಗಿ ಒಂದು ಸಮಾಜದ ಸಾಂಸ್ಕೃತಿಕ ಜೀವನವನ್ನು ರೂಪಿಸುವುದು ಅದರ ವಿದ್ಯಾವಂತ ಮಧ್ಯಮ ವರ್ಗ. ಯುಗಯುಗಗಳಿಂದಲೂ ಈ ವರ್ಗದ ಹಿಂದೂ ಮಹಿಳೆಯರು ತಮ್ಮ ಮೌಲ್ಯಗಳಿಗೂ ಜೀವನವಿಧಾನ ಗಳಿಗೂ—ಅವು ಉತ್ತಮವಾಗಿದ್ದವೋ ಇಲ್ಲವೋ—ಬಲವಾಗಿ ಅಂಟಿಕೊಂಡಿದ್ದರು. ಆದರೆ ದೇಶದ ವಿಭಜನೆ, ಜೊತೆಗೆ ಹೊಸದಾಗಿ ದೊರೆತ ಸ್ವಾತಂತ್ರ್ಯಗಳ ಪರಿಣಾಮವಾಗಿ ಉಂಟಾದ ಹಠಾತ್ ಬದಲಾವಣೆಗಳು ಅವರಿಗೆ ಒಂದು ಬಗೆಯ ಸ್ವೇಚ್ಛೆಯನ್ನು ತಂದಿತ್ತವು. ಇದರಿಂದಾಗಿ ಅವರು, ಹಿಂದೆ ಕೇವಲ ಪುರುಷರಿಗೆ ಮೀಸಲೆಂದು ಭಾವಿಸಿದ್ದ ಅನೇಕ ಕಾರ್ಯಕ್ಷೇತ್ರಗಳಿಗೆ ಹೆಜ್ಜೆಯಿಡುವಂತಾದರು.

ಇಂದು ಸ್ತ್ರೀಯರಿಗೆ ತಮಗೆ ಬೇಕಾದ ಕ್ಷೇತ್ರದಲ್ಲಿ ಉತ್ತಮ ಶಿಕ್ಷಣ ದೊರೆಯುತ್ತಿದೆ. ಅವರೀಗ ಒಳ್ಳೆಯ ಹುದ್ದೆಗಳನ್ನು ಗಳಿಸಿ, ಕುಟುಂಬದ ಗಂಡಸರನ್ನು ಅವಲಂಬಿಸದೆ, ತಮ್ಮದೇ ಆದ ಸಂಪಾದನೆಯಿಂದ ಜೀವನಮಟ್ಟವನ್ನು ಹೆಚ್ಚಿಸಿಕೊಂಡಿದ್ದಾರೆ. ತನ್ಮೂಲಕ ಅವರ ಆತ್ಮವಿಶ್ವಾಸವೂ, ಸಾಮಾಜಿಕ ಜೀವನದಲ್ಲಿ ಧೈರ್ಯವೂ ವರ್ಧಿಸಿವೆ. ಅರ್ಹರೂ ಕಾರ್ಯದಕ್ಷರೂ ಆದ ಮಹಿಳೆಯರನ್ನೀಗ ಸರ್ಕಾರಿ ಆಡಳಿತಯಂತ್ರ, ನ್ಯಾಯಾಂಗ, ಪೋಲೀಸ್ ಮತ್ತು ಸಶಸ್ತ್ರ ಪಡೆಗಳು, ಆಧುನಿಕ ವಾಣಿಜ್ಯ ಸಂಸ್ಥೆಗಳು, ಉನ್ನತ ಶಿಕ್ಷಣ ಕೇಂದ್ರಗಳು— ಎಲ್ಲೆಲ್ಲೂ ನೋಡು ವುದು ಸಾಮಾನ್ಯವಾಗಿದೆ. ಇಂಥ ಉದ್ಯೋಗಾವಕಾಶ ಗಳಿಂದಾಗಿ ಚಿಕ್ಕ ಮಕ್ಕಳಿರುವ ವಿಧವೆಯರಿಗೆ ಬಹಳಷ್ಟು ಸಹಾಯವಾಗಿದೆ. ಅವರೀಗ ತಮ್ಮ ಸ್ವಾತಂತ್ರ್ಯ, ಘನತೆಗಳನ್ನು ಉಳಿಸಿಕೊಂಡು ಜೀವಿಸಬಲ್ಲರು. ತಮ್ಮ ತಂದೆಯ ಮತ್ತು ಗಂಡನ ಆಸ್ತಿಯ ಮೇಲೆ ಈಗ ಸ್ತ್ರೀಯರಿಗೆ ಸಮಾನ ಉತ್ತರಾಧಿಕಾರವಿದೆ.

ಸಾವಿರಾರು ವರ್ಷಗಳಿಂದ ಅಸ್ತಿತ್ವದಲ್ಲಿದ್ದ ಬಹುಪತ್ನಿತ್ವ ಈಗ ಅಳಿದು, ಏಕಪತ್ನಿತ್ವ ಬಲವಾಗಿ ಜಾರಿಗೆ ಬಂದಿದೆ. ವಿಚ್ಛೇದನವೀಗ ಸುಲಭ. ಗಂಡ–ಹೆಂಡತಿಯರಿಬ್ಬರಿಗೂ ಅದು ಸಮಾನವಾಗಿ ಲಭ್ಯ. ಹೆಣ್ಣುಮಕ್ಕಳ ಮದುವೆ ವಯಸ್ಸನ್ನು ೧೮ ವರ್ಷಕ್ಕೆ ನಿಗದಿಗೊಳಿಸಲಾಗಿದೆ. ಮಾತ್ರವಲ್ಲ, ಹೆಂಗಸರೀಗ ಸಾಮಾನ್ಯವಾಗಿ ಇನ್ನೂ ತಡವಾಗಿಯೇ, ಎಂದರೆ ಸುಮಾರು ೨೦ ವರ್ಷದ ಬಳಿಕವೇ, ಮದುವೆಯಾಗುತ್ತಿದ್ದಾರೆ. ನಿಜಕ್ಕೂ ಇದೊಂದು ಸ್ವಾಗತಾರ್ಹ ಬದಲಾವಣೆಯೇ. ತಮ್ಮಿಚ್ಛೆಯಂತೆ ಅವಿವಾಹಿತರಾಗಿಯೇ ಉಳಿಯುವ, ಅಥವಾ ಸ್ತ್ರೀಯರ ಮಠ ಗಳಿಗೆ ಸೇರಿಕೊಳ್ಳುವ ಆಯ್ಕೆಯನ್ನೂ ಇಂದಿನ ಮಹಿಳೆಯರು ಬಳಸಿಕೊಳ್ಳುತ್ತಿದ್ದಾರೆ. ಹಿಂದಿನ ದಿನಗಳಲ್ಲಿ ಇವುಗಳನ್ನು ಜನ ಕೇಳಿಯೂ ಇರಲಿಲ್ಲ ಎನ್ನಬೇಕು!

ಆದರೆ ಈ ಒಳ್ಳೆಯ ಬದಲಾವಣೆಗಳ ನಡುವೆ ಅನಪೇಕ್ಷಣೀಯವಾದ ಕೆಲವು ಬೆಳವಣಿಗೆಗಳೂ ಇವೆ. 'ಆಧುನಿಕ'ರಾಗುವ ಅವಸರದಲ್ಲಿ ಹೆಂಗಸರೀಗ—ಗಂಡಸ ರಂತೆಯೇ—ಪಾಶ್ಚಾತ್ಯ ಸಂಸ್ಕೃತಿಯನ್ನು ಅನುಕರಿಸುವ ಹುಚ್ಚಿಗೆ ಬಲಿಯಾಗುತ್ತಿದ್ದಾರೆ. ಪರಿಣಾಮವಾಗಿ, ಕಾಲದ ಪರೀಕ್ಷೆಯನ್ನು ಗೆದ್ದು ಉಳಿದಿದ್ದ ಹಿಂದೂ ಜೀವನಮೌಲ್ಯಗಳು ನಶಿಸಿಹೋಗು ತ್ತಿವೆ. ಪರಿಪೂರ್ಣ ಪತ್ನಿತ್ವ ಮತ್ತು ಪರಿಪೂರ್ಣ ಮಾತೃತ್ವ ಎನ್ನುವುದು ಸನಾತನವೂ ಶಾಶ್ವತವೂ ಆದ ಒಂದು ಹಿಂದೂ ಆದರ್ಶ. ಶ್ರೀರಾಮಕೃಷ್ಣ ಪರಮಹಂಸರ (ಕ್ರಿ.ಶ. ೧೮೩೬–೧೮೮೬) ದಿವ್ಯ ಸಹಧರ್ಮಿಣಿಯಾಗಿದ್ದ ಶ್ರೀಮಾತೆ ಶಾರದಾ ದೇವಿಯವರು (ಕ್ರಿ.ಶ. ೧೮೫೩–೧೯೨೦) ತಮ್ಮ ಜೀವನದಲ್ಲಿ ಸಾಕಾರಗೊಳಿಸಿ ತೋರಿಸಿದ ಆದರ್ಶ ಇದು. ಆದರೆ ಕ್ರಮೇಣ ಇದು ಮರೆಯಾಗುತ್ತಿದೆ. ಹಿಂದೂ ಸಮಾಜಕ್ಕೆ ಇದು ಒಳ್ಳೆಯ ಲಕ್ಷಣವಲ್ಲ. ನಮ್ಮ ಮಹಿಳೆಯರು ಈ ಅಪಾಯವನ್ನು ಆದಷ್ಟು ಬೇಗನೆ ಮನಗಂಡಷ್ಟೂ ಕ್ಷೇಮ.

## ಆಶ್ರಮದ ವಿಶೇಷ ಉತ್ಸವದ ದಿನಗಳು

**ಡಿಸೆಂಬರ್ ೨೦೦೬**

| | | |
|---|---|---|
| ೦೧ | ಏಕಾದಶಿ | ಶುಕ್ರವಾರ |
| ೧೧ | ಶ್ರೀಶಾರದಾದೇವಿ ಜಯಂತಿ | ಸೋಮವಾರ |
| ೧೬ | ಸ್ವಾಮಿ ಶಿವಾನಂದ ಜಯಂತಿ | ಶನಿವಾರ |
| ೧೬ | ಏಕಾದಶಿ | ಶನಿವಾರ |
| ೨೪ | ಕ್ರಿಸ್‌ಮಸ್ ಈವ್ | ಭಾನುವಾರ |
| ೨೬ | ಸ್ವಾಮಿ ಶಾರದಾನಂದ ಜಯಂತಿ | ಮಂಗಳವಾರ |
| ೩೦ | ಏಕಾದಶಿ | ಶನಿವಾರ |